## 15

# ಪ್ರಿಮಿಲ್ಲೆನಿಯಲಿಜಮ್‌ದ ಗಂಡಾಂತರಗಳು

ಈ ಪಾಠಕ್ಕಾಗಿರುವ ಶೀರ್ಷಿಕೆ ಪ್ರಿಮಿಲ್ಲೆನಿಯಲಿಜಮ್ ಗಂಡಾಂತರ ಕಾರಿಯಾದ ಬೋಧನೆಯೆಂದು ಯೋಚಿಸುವದನ್ನು ಅನ್ವಯಿಸುತ್ತದೆ. ಇದನ್ನು ವಿಚಾರಿಸಲು ನನಗೆ ಕಾರಣಗಳಿವೆ. ಈ ತತ್ವದ ವಿವಿಧ ಸಿದ್ಧಾಂತಗಳೊಂದಿಗೆ ಕೆಲವು ಬೋಧನೆಗಳು ನಿಜವಾದ ಸುವಾರ್ತೆಗೆ ವಿರುದ್ಧವಾದವುಗಳೂ ಹೊಸ ಒಡಂಬಡಿಕೆಯ ಬೋಧನೆಯ ಬೇರನ್ನೇ ಹೊಡೆಯುವಂಥವುಗಳೂ ಆಗಿರುವದನ್ನು ನೋಡುತ್ತೇವೆ.

ಪ್ರಿಮಿಲ್ಲೆನಿಯಲಿಜಮ್‌ದ ಭಕ್ತರ ಜೀವನಗಳಲ್ಲಿ ಅದರ ಕೆಲವು ಫಲಗಳನ್ನು ನಾನು ನೋಡಿದ್ದೇನೆ. ಒಂದು ಸಲ ಸಂತೃಪ್ತಿಯಿಂದ ಸುವಾರ್ತೆಯ ಮಹಾ ಸತ್ಯಗಳನ್ನು ಅವರು ಮರೆತು ಬಿಡುವಂತೆ ಈ ತತ್ವದಲ್ಲಿ ಮನಸ್ಸುಳ್ಳವರಾಗಿದ್ದವರನ್ನು ನಾನು ನೋಡಿದ್ದೇನೆ. ಅವರು ಪ್ರಿಮಿಲ್ಲೆನಿಯಲಿಜಮ್‌ನ್ನೇ ಮಾತಾಡುವರು, ಬೋಧಿಸುವರು ಮತ್ತು ಬರೆಯುವರು. ಅದರಲ್ಲಿ ಧರ್ಮಾಂಧರಾಗಲು ಮನಸ್ಸುಳ್ಳವರಾಗುವರು. ಅವರಿಗೆ ಪ್ರಿಮಿಲ್ಲೆನಿಯಲಿಜಮ್ ಪ್ರಸಂಗಿಸಲೇ ಬೇಕಾದ ಮಹತ್ವದ ಸಂಗತಿಯಾಗುವುದು. ಅದಕ್ಕೆ ಆಶ್ರಯ ಕೊಡುವದನ್ನು ತಿರಸ್ಕರಿಸುವ ಸಭೆಗಳನ್ನು ಅವರು ತಪ್ಪಿಸಿಕೊಳ್ಳುವರು. ಅವರಲ್ಲಿದ್ದಿರಬಹುದಾದ ತತ್ವದ ಭಿನ್ನತೆಗಳ ಇತರ ಸಂಗತಿಗಳ ಬಗ್ಗೆ ಗಮನಿಸದೇ ಈ ಬೋಧನೆಯನ್ನು ಸ್ವೀಕರಿಸುವ ಇತರರನ್ನು ಅವರು ಹುಡುಕುವರು.

### ಪ್ರಿಮಿಲ್ಲೆನಿಯಲಿಜಮ್‌ದ ಬೋಧನೆ

ಪ್ರಿಮಿಲ್ಲೆನಿಯಲಿಜಮ್ ಎಂಬುದು ಭೂಲೋಕದ ಮೇಲೆ ಭವಿಷ್ಯದಲ್ಲಿ ವಿಶ್ವದ ನೀತಿಯ ಒಂದು ಸಾವಿರ ವರ್ಷಗಳ ಅವಧಿಯಿರುವದೆಂಬ ಬೋಧನೆಯ ಪ್ರಕಾರ ಆ ಸಮಯದ ಮೊದಲು ಕ್ರಿಸ್ತನು ಲೋಕಕ್ಕೆ ಹಿಂದಿರುಗುವನು. ಆ ಸಮಯದಲ್ಲಿ ಭೂಲೋಕದ ಮೇಲೆ ಆಳಿಕೆ ಮಾಡುವನು. ಇತರ ವಿಷಯಗಳೂ ಒಳಗೊಂಡಿವೆ. ಆದರೆ ಇಲ್ಲಿ ಸಂಕ್ಷಿಪ್ತವಾಗಿ ನೋಡುವೆವು.

ಈ ಬೋಧನೆಯನ್ನು ವಿರೋಧಿಸುವ ವಿವಿಧ ಬೈಬಲ್ ಮಾರ್ಗಗಳು ಇರುವವು. ಪ್ರವಾದನೆಯ ರಾಜ್ಯವು ಆಗಲೇ ಸ್ಥಾಪಿಸಲ್ಪಟ್ಟಿರುವದೆಂಬುದನ್ನು ಅದು ತೋರಿಸುತ್ತದೆ. ಈಗ ಕ್ರಿಸ್ತನು ದಾವೀದನ ಸಿಂಹಾಸನದ ಮೇಲೆ ಆಳಿಕೆ ಮಾಡುತ್ತಿರುವದನ್ನು ತೋರಿಸುವುದು. ಈ ವಿಷಯಗಳು ಈ ತತ್ವವನ್ನು ವಿರೋಧಿಸುತ್ತವೆ ಮತ್ತು ಪರಿಶುದ್ಧ ಬರಹಗಳಲ್ಲಿ ಅವು ಸ್ಪಷ್ಟವಾಗಿ ಬೋಧಿಸಲ್ಪಟ್ಟಿವೆ.

ಸತ್ಯವೇದಾಧ್ಯಯನದ ಒಂದು ನಿಯಮವು ಸಾಮಾನ್ಯವಾಗಿ ಗುರುತಿಸಲ್ಪಟ್ಟಿದ್ದು ಮತ್ತು ಅಸ್ಪಷ್ಟವಾಗಿ ಇರುವ ವಾಕ್ಯಗಳು ಸರಳವಾದ ವಾಕ್ಯಗಳ ಬೆಳಕಿನಲ್ಲಿ ವ್ಯಾಖ್ಯಾನಿಸಲ್ಪಡತಕ್ಕದ್ದು. ಹೀಗಿದ್ದರೂ ಪ್ರಿಮಿಲ್ಲೆನಿಯಲಿಜಮ್‌ಗೆ ಮೊದಲು ಅಲಂಕಾರಿಕವಾಗಿರುವ ವಾಕ್ಯಗಳನ್ನು ವ್ಯಾಖ್ಯಾನಿಸುವ. ಆಮೇಲೆ ಸರಳವಾದವುಗಳನ್ನು ಒಪ್ಪಿಕೊಳ್ಳುವಂತೆ

ತಿರುಗಿಸುವ ಇಲ್ಲವೇ ಅವುಗಳನ್ನು ಒಟ್ಟಾಗಿ ಕಡೆಗಣಿಸುವ ರೂಢಿಯಿರುವುದು.

ಪ್ರಿಮಿಲ್ಲೆನಿಯಲಿಸ್ಟರು ಬೈಬಲನ್ನು ನಂಬುವದರ ಬಗ್ಗೆ ಬಹಳವಾಗಿ ಹೊಗಳಿಕೊಳ್ಳುವರು. ಇತರರು ಅದನ್ನು ನಂಬುವದಿಲ್ಲವೆಂದು ದೂರುವರು. ರೂಪಕವು ರೂಪಕಾಲಂಕಾರ ವಾಗಿರುವುದೆಂದು ಒಬ್ಬನು ನಂಬುವಾಗ ಅವನು ಬೈಬಲನ್ನು ನಂಬುವದಿಲ್ಲವೆಂದು ಅವರು ಯೋಚಿಸುವಂತೆ ತೋರುತ್ತದೆ. ಮೊದಲು ರೂಪಕಾಲಂಕಾರಗಳ ವಾಕ್ಯ ಗಳನ್ನು ವ್ಯಾಖ್ಯಾನಿಸುವ ರೂಢಿಯು ಮತ್ತು ಆ ಮೇಲೆ ಸರಳವಾದವುಗಳನ್ನು ಒಪ್ಪುವಂತೆ ಮಾಡುವುದು ಸತ್ಯಕ್ಕೆ ತಲುಪುವ ಮಾರ್ಗವಾಗಿರುವದಿಲ್ಲ. ಅದು ಯಾವುದೇ ಕ್ರಯ ಕೊಟ್ಟರೂ ತಪ್ಪಾದ ಸಿದ್ಧಾಂತವನ್ನು ಕಾಯ್ದು ಕೊಳ್ಳುವುದಾಗಿದೆ.

ಪ್ರಿಮಿಲ್ಲೆನಿಯಲಿಜಮ್‌ವು ಇತರ ಎಲ್ಲವುಗಳಿಗಿಂತ ರಕ್ಷಣೆಯ ಯೋಜನೆಗಿಂತ, ರಕ್ತ ಕ್ರಯದಿಂದ ಕೊಳ್ಳಲ್ಪಟ್ಟ ಸಭೆಗಿಂತ ಹೆಚ್ಚು ಪ್ರಭಾವವನ್ನು ಅದನ್ನು ನಂಬುವವರ ಮೇಲೆ ಬೀರುತ್ತದೆ. ಅವರ ಅನುಯಾಯಿಗಳು "ಸಭೆಯ ಯುಗವನ್ನು" ಹಾಗೂ ಕರ್ತನ ಸಭೆಗೆ ಸಂಬಂಧಿಸಿದ ತತ್ವಗಳಿಗೆ ಎರಡನೆಯ ಸ್ಥಾನ ಕೊಡುವದಕ್ಕೆ ಕಾರಣ ವಾಗುವುದು. ಇದು ಹೇಗೆ ಮಾಡಲ್ಪಡುತ್ತದೆ ಎಂಬುದನ್ನು ನೋಡೋಣ.

## ಪ್ರಿಮಿಲ್ಲೆನಿಯಲಿಸ್ಟರ ವಿಧಾನ ಮತ್ತು ಯುಕ್ತಿ ಕೌಶಲ್ಯಗಳು

ಪ್ರಿಮಿಲ್ಲೆನಿಯಲಿಸ್ಟರು ರಾಜ್ಯವನ್ನು ಮುಂತಿಳಿಸುವ ಹಳೇ ಒಡಂಬಡಿಕೆಯ ವಾಕ್ಯಗಳನ್ನು ಓದುವರು ಮತ್ತು ಅದು "ಹತ್ತಿರವಾಗಿದೆ" ಎಂದು ಯೋಹಾನ ಮತ್ತು ಯೇಸು ಪ್ರಕಟಿಸಿದ್ದನ್ನು ತಿಳಿದು ಕೊಂಡಿರುವರು. ಹೀಗಿದ್ದರೂ ಅದು ಇನ್ನೂ ಸ್ಥಾಪಿಸಲ್ಪಟ್ಟಿರುವದಿಲ್ಲ ಆದರೆ ಮುಂದಕ್ಕೆ ಹಾಕಲ್ಪಟ್ಟಿದೆ ಎಂಬ ತೀರ್ಮಾನಕ್ಕೆ ಬರುವರು. ಅದು ಯೇಸುವಿನಿಂದ ಮುಂದೆ ಹಾಕಲ್ಪಟ್ಟಿದೆ ಇಲ್ಲವೇ ಅದನ್ನು ಸೂಚಿಸುತ್ತದೆ ಎಂದು ಹೇಳುವ ಯಾವುದೇ ವಾಕ್ಯ ವಿರುವುದೋ? ಇಲ್ಲ. ಹಾಗಾದರೆ ಅವರು ಈ ಭಾವನೆಯನ್ನು ಹೇಗೆ ಪಡೆದುಕೊಂಡರು. ರಾಜ್ಯದ ಮತ್ತು ಸಿಂಹಾಸನದ ಬಗ್ಗೆ ಹಳೇ ಒಡಂಬಡಿಕೆಯ ವಾಕ್ಯವನ್ನು ಅವರು ಓದುವರು ಮತ್ತು ಭೂಲೋಕದ ಪ್ರಾಪಂಚಿಕ ಆಳಿಕೆಯು ಮುಂತಿಳಿಸಲ್ಪಟ್ಟಿದೆಯೆಂಬ ತೀರ್ಮಾನಕ್ಕೆ ಬರುವರು. ಯೋಹಾನ ಮತ್ತು ಯೇಸುವಿನಿಂದ ಸಾರಲ್ಪಟ್ಟ ರಾಜ್ಯದ ಬಗೆಗೂ ಅದೇ ಸಂಗತಿಯನ್ನು ಅವರು ಯೋಚಿಸುವರು. ಯೇಸು ಎಂದಾದರೂ ಇಂಥ ರಾಜ್ಯವನ್ನು ಸ್ಥಾಪಿಸಿದ್ದನ್ನು ಕಂಡುಕೊಳ್ಳುವದಿಲ್ಲ. ಆದುದರಿಂದ ಆತನು ಅದನ್ನು ಮುಂದೆ ಹಾಕಿದನೆಂದು ನಿರ್ಣಯಿಸಿಕೊಳ್ಳುವರು.

ಪ್ರವಾದಿಗಳಿಂದ ಮುಂತಿಳಿಸಲ್ಪಟ್ಟ ಹಾಗೂ ಯೋಹಾನ ಮತ್ತು ಯೇಸುವಿನಿಂದ ಘೋಷಿಸಲ್ಪಟ್ಟ ರಾಜ್ಯದ ಸ್ವಭಾವದ ಬಗ್ಗೆ ತಮ್ಮ ವೈಯಕ್ತಿಕ ವಿಚಾರವು ತಪ್ಪಾಗಿರಬಹುದೆಂದು ಪ್ರಿಮಿಲ್ಲೆನಿಯಲಿಸ್ಟರಿಗೆ ಹೊಳೆದಂತೆ ತೋರುವುದಿಲ್ಲ. ದಾನಿಯೇಲು 2:44 ರಾಜ್ಯದ ಬಗ್ಗೆ ಮುಂತಿಳಿಸಿದೆ ಮತ್ತು ಅದು ರೋಮ್ ಸಾಮ್ರಾಜ್ಯದ ದಿನಗಳಲ್ಲಿ ಸ್ಥಾಪಿಸಲ್ಪಟ್ಟಿತೆಂದು ಅವರು ಹೇಳುವರು. ಆ ರಾಜ್ಯವನ್ನು ಸ್ಥಾಪಿಸುವ ಸಂಪೂರ್ಣ ಉದ್ದೇಶದಿಂದ ಯೇಸು ಬಂದನೆಂದು ಅವರು ಒಪ್ಪಿಕೊಳ್ಳುವರು. ಹೀಗಿದ್ದರೂ ಯೆಹೂದ್ಯರು ರಾಜ್ಯಕ್ಕಾಗಿ ಸಿದ್ಧರಾಗಿರದೇ ಇದ್ದುದರಿಂದ ಮತ್ತು ಅವರು ಅದನ್ನು ಸ್ಥಾಪಿಸದೇ ಇದ್ದುದರಿಂದ ಅದನ್ನು ಮುಂದೆ ಹಾಕಲು ಯೇಸುವಿಗೆ ಅಗತ್ಯವಾಗಿತ್ತೆಂದು ಅವರು ಹೇಳುವರು.

ಪ್ರಿಮಿಲ್ಲೆನಿಯಲಿಸ್ಟರ ಪ್ರಕಾರವಾಗಿ ರೋಮ್ ಪುನರುಜ್ಜೀವನಗೊಳ್ಳುವುದು ಮತ್ತು ಇನ್ನೊಮ್ಮೆ ಭೂಲೋಕವನ್ನು ಆಳುವುದು. ದಾನಿಯೇಲ 2:44ನ್ನು ನೆರವೇರಿಸುವದಕ್ಕಾಗಿ ಒದಗಿಸಲು ಅವರು ಅದನ್ನಿಟ್ಟುಕೊಳುವರು. ದ್ವಿತೀಯ ಜಾಗತಿಕ ಯುದ್ಧದಲ್ಲಿ ಇಟಲಿಯು

ಪುನಃ ಯುದ್ಧಕ್ಕೆ ಹೊರಡುವದೆಂದು ತೋರಿದಾಗ ಪ್ರಿಮಿಲ್ಲೆನ್ನಿಯಲ್ ಬರಹಗಾರರ ಲೆಕ್ಕಣಿಗಳು ವಿಫುಲವಾಗಿ ಬರೆದವು. ಆದರೆ ಆಕ್ಸಿಸ್ ಶಕ್ತಿಗಳು ತುಳಿಯಲ್ಪಟ್ಟಾಗ ಲೆಕ್ಕಣಿಗಳು ಮೌನವಾದವು. ಮೈತ್ರಿಹೊಂದಿದ ಸೇನೆಗಳು ಯೇಸುವಿನ ಸಮಯದಲ್ಲಿ ಸ್ವೀಕರಿಸದ ಯೆಹೂದ್ಯರಂತೆ ದೇವರ ಯೋಜನೆಗಳನ್ನು ನಿಷ್ಫಲಗೊಳಿಸಿದವೋ?

ಈ ವಿಷಯಗಳಲ್ಲಿ ದೇವರು ತಡಮಾಡುವದನ್ನು ತಿಳಿದುಕೊಳ್ಳಲಾರೆವೆಂದು ಪ್ರಿಮಿಲ್ಲೆನ್ನಿಯಲಿಸ್ಟರು ಹೇಳುವರು. ಅವರು ಯೋಜನೆಗಳನ್ನು ಕರ್ತನಿಗೆ ಅನ್ವಯಿಸುವರು ಮತ್ತು ಒಂದು ಘಟನೆಯು ಸಂಭವಿಸದೇ ಹೋದಾಗ, ಅವರು ಕರ್ತನು ಅದನ್ನು ಮುಂದೆ ಹಾಕಿದನು ಇಲ್ಲವೇ ಆತನು ತನ್ನ ಯೋಜನೆಗಳನ್ನು ಬದಲಾಯಿಸಿದನು ಎಂದು ಅವರು ನಿರ್ಣಯಿಸುವಂತೆ ತೋರುತ್ತದೆ. ಅದರ ಬದಲಾಗಿ, ದೇವರ ಯೋಜನೆಗಳ ಬಗ್ಗೆ ಅವರ ಭಾವನೆಗಳು ತಪ್ಪಾಗಿವೆಯೆಂದು ಯಾಕೆ ಅವರು ನಿರ್ಣಯಿಸಿಕೊಳ್ಳುವುದಿಲ್ಲ?

## ಪ್ರಿಮಿಲ್ಲೆನಿಯಲಿಜಮ್‌ದ ಫಲಿತಾರ್ಥಗಳು (ಸಿಕ್ಕುಗಳು)

ಹಳೇ ಒಡಂಬಡಿಕೆಯ ಪ್ರವಾದನೆಯ ರಾಜ್ಯವು ಸ್ಥಾಪಿಸಲ್ಪಟ್ಟಿದೆ. ಇಬ್ರಿಯ 12:28, ಕೊಲೊಸ್ಸೆ 1:13, ಹಾಗೂ ಪ್ರಕಟನೆ 1:9ರಂಥ ವಾಕ್ಯಗಳಲ್ಲಿ ಇದು ಪ್ರಶ್ನೆಯಿಲ್ಲದೇ ಸೂಚಿಸಲ್ಪಟ್ಟಿದೆ. ಈ ವಾಕ್ಯಗಳು ರಾಜ್ಯದ ಅಸ್ತಿತ್ವವನ್ನು ಅನ್ವಯಿಸುತ್ತದಷ್ಟೇ ಅಲ್ಲ ಅದನ್ನು ಘೋಷಿಸುತ್ತವೆ. "ಅಲುಗಾಡಿಸಲ್ಪಡದ ರಾಜ್ಯವನ್ನು ನಾವು ಸ್ವೀಕರಿಸುವೆವು" ಎಂದು ಇಬ್ರಿಯ 12:28 ಹೇಳುತ್ತದೆ. ಕೊಲೊಸ್ಸೆ 1:13ರಲ್ಲಿಯ ಪೌಲನ ಹೇಳಿಕೆಯು ದೇವರು, "ನಮ್ಮನ್ನು ತನ್ನ ಪ್ರಿಯಕುಮಾರನ ರಾಜ್ಯದೊಳಗೆ ವರ್ಗಾಯಿಸಿದ್ದಾನೆ" ಎಂಬ ಪರಿಣಾಮಕ್ಕಾಗಿದೆ. ಪ್ರಕಟನೆ 1:9ರಲ್ಲಿ ಯೋಹಾನನು "ರಾಜ್ಯದಲ್ಲಿ" ತಾನು ಸಹೋದರನಾಗಿದ್ದಾನೆಂದು ಹೇಳಲ್ಪಟ್ಟಿದೆ.

ದಾವೀದನ ಸಿಂಹಾಸನದ ಮೇಲೆ ಕುಳಿತುಕೊಳ್ಳುವಂತೆ ಮಾಡಲು ದೇವರು ಕ್ರಿಸ್ತನನ್ನು ಎಬ್ಬಿಸಿದನು (ಅಪೊಸ್ತಲರ ಕೃತ್ಯ 2:30, 31); "ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನು ಮತ್ತು ಪರಲೋಕ ಸ್ಥಳದೊಳಗೆ ತನ್ನ ಬಲಗಡೆಯಲ್ಲಿ ಕೂಡ್ರಿಸಿಕೊಂಡನು" (ಎಫೆಸ 1:20). ಕ್ರಿಸ್ತನು, "ಪಾಪಗಳನ್ನು ಶುದ್ಧಿ ಮಾಡಿದ ಮೇಲೆ ಉನ್ನತ ಲೋಕದೊಳಗೆ ಮಹತ್ವವುಳ್ಳ ದೇವರ ಬಲಗಡೆಯಲ್ಲಿ ಕುಳಿತು ಕೊಂಡನು" (ಇಬ್ರಿಯ 1:3). ದಾವೀದನ ಗುಡಾರವು (ಅಪೊಸ್ತಲರ ಕೃತ್ಯ 15:14-17) ಆತ್ಮೀಕ ರೀತಿ ಯಲ್ಲಿ ಪುನಃ ಕಟ್ಟಲ್ಪಟ್ಟಿದೆ; ಆದುದರಿಂದ ಈಗ ಪರಿಶುದ್ಧರೊಂದಿಗೆ ಜೊತೆ ಪ್ರಜೆಗಳಾಗಿ ಅನ್ಯರು ಭಾಗ್ಯಗಳನ್ನು ಅನುಭವಿಸುವರು. ಪರಿಶುದ್ಧ ಬರಹಗಳ ಹೋಲಿಕೆಯು ಕ್ರಿಸ್ತನ ರಾಜ್ಯವು ಸಭೆಯಾಗಿದೆ ಎಂದು ಸೂಚಿಸುವುದು. ಆತನಿಗೆ ಒಂದೇ ದೇಹ ವಿರುವದರಿಂದ, ಮತ್ತು ಆತನು ತನ್ನ ರಾಜ್ಯದ ಮೇಲೆ ಆಳುವದರಿಂದ, ತನ್ನ ಸಭೆಯ ಶಿರಸ್ಸಾಗಿರುವದರಿಂದ ಅವು ಒಂದೇ ದೇಹವಾಗಿವೆ ಎಂದಾಗುತ್ತದೆ (ಎಪೆಸ 4:4).

ರಾಜ್ಯವು ಸ್ಥಾಪಿಸಲ್ಪಟ್ಟಿದೆಯೆಂದು ಪ್ರಿಮಿಲ್ಲೆನಿಯಲಿಸ್ಟರು ನಂಬುವದಿಲ್ಲ. ಆದರೆ ಸಭೆಯು ಸ್ಥಾಪಿಸಲ್ಪಟ್ಟಿದೆ ಯೆಂದು ಅವರು ನಂಬುವರು. ಅಂದರೆ ಅವರು ರಾಜ್ಯವು ಸಭೆಯಾಗಿದೆಯೆಂಬುದನ್ನು ನಂಬುವದಿಲ್ಲ. ಹಾಗಾದರೆ ಅವರ ಪ್ರಕಾರವಾಗಿ ದೇವರ ಯೋಜನೆಯಲ್ಲಿ ಸಭೆಯು ಯಾವ ಪಾತ್ರವಹಿಸುವದು?

ರಾಜ್ಯವನ್ನು ಮುಂದಕ್ಕೆ ಹಾಕುವ ತೀರ್ಮಾನ ಮಾಡಲ್ಪಟ್ಟಾಗ, ಅದಕ್ಕೆ ಬದಲಾಗಿ ಸಭೆಯು ಇಡಲ್ಪಟ್ಟಿದೆಯೆಂದು ಪ್ರಿಮಿಲ್ಲೆನಿಯಲಿಸ್ಟರ ಬೋಧನೆ ಹೇಳುತ್ತದೆ. ಈ ತತ್ವದ ಪ್ರಕಾರ ರಾಜ್ಯವು ಸ್ಥಾಪಿಸಲ್ಪಡಲಾರದೆಂದು ಯೇಸು ನೋಡಿದಾಗ, ಆತನು

ತನ್ನ ಸಭೆಯನ್ನು ಸ್ಥಾಪಿಸುವ ಉದ್ದೇಶವನ್ನು ಪ್ರಕಟಿಸಿದನು. ಈ ಬೋಧನೆಯು ಸರಿಯಾಗಿದ್ದರೆ, ಆಗ ಯೇಸು ಸಭೆಯನ್ನು ಕಟ್ಟುವೆನೆಂದು ವಾಗ್ದನ ಮಾಡಿದನಂತರ ರಾಜ್ಯವು ಸಮೀಪವಾಗಿದೆ ಎಂಬುದಕ್ಕೆ ಸಂಬಂಧಿಸಿ ಇನ್ನೂ ಮುಂದೆ ಪ್ರಕಟಿಸುವದನ್ನು ನಾವು ನಿರೀಕ್ಷಿಸಬಾರದು. ಇದಕ್ಕೆ ವಿರುದ್ಧವಾಗಿ ಆತನು ಹೇಳಿದ್ದನ್ನು ಕಂಡುಕೊಳ್ಳುತ್ತೇವೆ. ಈ ಒಂದೇ ಸಂಗತಿಯು ಪ್ರಿಮಿಲ್ಲೆನಿಯಲಿಜಮ್‌ದ ಸಿದ್ಧಾಂತವನ್ನು ಎಂದೆಂದಿಗೂ ತೆಗೆದು ಹಾಕತಕ್ಕದು. ಲೂಕ 10:9ರಲ್ಲಿ "ದೇವರ ರಾಜ್ಯವು ನಿಮ್ಮ ಸಮೀಪಕ್ಕೆ ಬಂದಿದೆ" ಎಂದು ಪ್ರಕಟಿಸಲು ಎಪ್ಪತ್ತು ಶಿಷ್ಯರಿಗೆ ಹೇಳಲ್ಪಟ್ಟಿತು. ತನ್ನ ಸಭೆಯನ್ನು ಕಟ್ಟುವೆನೆಂದು ಯೇಸು ವಾಗ್ದಾನ ಮಾಡಿದ ನಂತರ ಈ ಹೇಳಿಕೆ ಕೊಡಲ್ಪಟ್ಟಿತು (ಮತ್ತಾಯ 16:18). ನಾವು ಹೇಗೆ ತಿಳಿದುಕೊಳ್ಳುವೆವು? ಲೂಕ 9ರಲ್ಲಿಯ ರೂಪಾಂತರದ ನಂತರ ಎಪ್ಪತ್ತು ಜನರಿಗೆ ಲೂಕ 10ರಲ್ಲಿ ಮಿತಿಯುಳ್ಳ ಆದೇಶವು ಕೊಡಲ್ಪಟ್ಟಿತು. ಹೀಗಿದ್ದರೂ ತನ್ನ ಸಭೆಯನ್ನು ಕಟ್ಟುವೆನೆಂದು ಯೇಸು ವಾಗ್ದಾನ ಮಾಡಿದ್ದು, ಮತ್ತಾಯ 16ರಲ್ಲಿ ಕೊಡಲ್ಪಟ್ಟಿದ್ದು ಮತ್ತಾಯ 17ರಲ್ಲಿ ದಾಖಲೆಯಾದ ರೂಪಾಂತರಕ್ಕಿಂತ ಮೊದಲಿನದಾಗಿದೆ. ಆದುದರಿಂದ ಲೂಕ 10ರಲ್ಲಿಯ ರಾಜ್ಯವು ಸಮೀಪಿಸಿದ್ದರ ಬಗ್ಗೆ ಯೇಸುವಿನ ಹೇಳಿಕೆಗಳು ಮತ್ತಾಯ 16ರಲ್ಲಿ ತನ್ನ ಸಭೆಯನ್ನು ಕಟ್ಟುವೆನೆಂದು ವಾಗ್ದಾನ ಮಾಡಿದ ನಂತರ ಹೇಳಲ್ಪಟ್ಟಿದೆ. ಯೇಸುವು ಸಭೆಯನ್ನು ಕಟ್ಟುವ ತನ್ನ ಉದ್ದೇಶವನ್ನು ಪ್ರಕಟಿಸಿದ ನಂತರವೇ ರಾಜ್ಯವು "ಸಮೀಪಿಸಿದೆ" ಎಂದು ಆತನು ಹೇಳಿದನೆಂದು ಬೇರೆ ಮಾತುಗಳಲ್ಲಿ ಹೇಳಬಹುದು.

ಸಭೆಯ ಬಗ್ಗೆ ಯೇಸುವು ಪ್ರಕಟಿಸಿದ್ದು ಆತನ ರಾಜ್ಯದ ವಾಗ್ದಾನಗಳ ತಿರಸ್ಕರಿಸುವಿಕೆಯಾಗಿರಲಿಲ್ಲ. ಎಲ್ಲಾ ಸಮಯದಲ್ಲಿ ಸಭೆಯು ದೇವರ ಮನಸ್ಸಿನಲ್ಲಿ ಇತ್ತೆಂಬುದು ಸತ್ಯವಾಗಿದೆ. ಅದು ಹಾಗೂ ಅದರ ರಚನೆಯ ಬಗ್ಗೆ ಎಫೆಸ 3 ರಲ್ಲಿ ಮಾತಾಡುತ್ತ ಪೌಲನು, "ದೇವರು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿ ಅನಾದಿಕಾಲದಿಂದ ಮಾಡಿದ ಸಂಕಲ್ಪದ ಮೇರೆಗೆ ..." (ವ. 11) ಎಂದು ಹೇಳಿದನು. ಅದೇ ಅಧ್ಯಾಯದಲ್ಲಿ ಅವನ ಅದ್ಭುತಕರವಾದ ಸ್ತೋತ್ರ ಗೀತೆಗಳಲ್ಲಿ ಒಂದರಲ್ಲಿ ಪೌಲನು, "ದೇವರಿಗೆ ಸಭೆಯಲ್ಲಿಯೂ ಕ್ರಿಸ್ತ ಯೇಸುವಿನಲ್ಲಿಯೂ ತಲತಲಾಂತರಕ್ಕೂ ಯುಗಯುಗಾಂತರಕ್ಕೂ ಸ್ತೋತ್ರ" (ವ. 21) ಎಂದು ಹೇಳಿದ್ದಾನೆ. "ತಲತಲಾಂತರಕ್ಕೂ" ಎಂಬ ಹೇಳಿಕೆಯನ್ನು ಗಮನಿಸಿರಿ. ಹೌದು, ಸಭೆಯು ದೇವರ ನಿತ್ಯ ಉದ್ದೇಶದಲ್ಲಿತ್ತು ಮತ್ತು ಆತನು "ಎಂದೆಂದಿಗೂ ಸದಾಕಾಲಕ್ಕೂ" ಅವರ ಮುಖಾಂತರ ಮಹಿಮೆ ಹೊಂದಲ್ಪಡಬೇಕು. ಸಭೆಯು ದೇವರು ಉದ್ದೇಶಿಸಿದ್ದರ, ಪ್ರವಾದಿಗಳು ಮುಂತಿಳಿಸಿದ, ಮತ್ತು ಕ್ರಿಸ್ತನು ಪ್ರಕಟಿಸಿದ್ದರ ನೆರವೇರುವಿಕೆಯು ಎಂದು ಪೌಲನು ಬೋಧಿಸಿದನು.

ಪ್ರಿಮಿಲ್ಲೆನಿಯಲಿಜಮ್ ಸತ್ಯವಾಗಿದ್ದರೆ, ದೇವರ ಉದ್ದೇಶದಲ್ಲಿ ಸಭೆಯು ಹೇಗೆ ಕೂಡಿಸಲ್ಪಟ್ಟಿತು? ಅದು ಹಾಗಿರುತ್ತಿರಲಿಲ್ಲ. ಹಳೇ ಒಡಂಬಡಿಕೆಯು ಒಂದೇ ಪ್ರವಾದ ನೆಯು ಅದಕ್ಕೆ ಹೇಗೆ ಸಂಬಂಧಿಸಲ್ಪಡಬಹುದು? ಯಾವುದೂ ಹಾಗಿರುತ್ತಿರಲಿಲ್ಲ. ಅವರ ಬೋಧನೆಯ ಪ್ರಕಾರ, ಮೂಲ ಉದ್ದೇಶವು ಮತ್ತು ಯೋಜನೆಯು ರಾಜ್ಯಕ್ಕಾಗಿತ್ತು, ಆದರೆ ರಾಜ್ಯವು ತಿರಸ್ಕರಿಸಲ್ಪಟ್ಟ ತರುವಾಯ ಸಭೆಯು ಬದಲಾಗಿ ಇಡಲ್ಪಟ್ಟಿತೆಂದು ಹೇಳುವರು.

ಕ್ರೈಸ್ತಯುಗವು ಆಕಸ್ಮಿಕವಾದ ಯುಗವಾಗಿದೆಯೋ? ಅದು ನಿರಾಶೆಯ ಬೀಳುವಿಕೆಯಾಗಿದೆಯೋ? ರಾಜ್ಯವು ಬರುವವರೆಗೆ ತುಂಬಿರಲು ಬದಲಾಗಿ ಇಡಲ್ಪಟ್ಟಿದೆಯೋ? ಆ ರಾಜ್ಯಕ್ಕಾಗಿ ಆಳಿಕೆ ಮಾಡುವ ತರಗತಿಯನ್ನು ಸಿದ್ಧಪಡಿಸುತ್ತ ರಾಜ್ಯದ ನಿರೀಕ್ಷೆಯಲ್ಲಿ ಅದು ಅಸ್ತಿತ್ವದಲ್ಲಿರುವುದೋ? ಇಲ್ಲ.

ಆದುದರಿಂದ, ಹೇಗೆ ಸಭೆಯು, ರಕ್ಷಣೆಯ ಯೋಜನೆಯು ಮತ್ತು ಈ ಕಾಲಕ್ಕೆ

ವಿಶಿಷ್ಟವಾಗಿರುವ ಇತರ ವಿಷಯಗಳು ಪ್ರಿಮಿಲ್ಲೆನಿಯಲಿಸ್ಟರ ಯೋಜನೆಯಲ್ಲಿ ಅಲ್ಪ ಸ್ಥಾನಹೊಂದಲು ಬಂದವೆಂಬುದನ್ನು ಅರ್ಥ ಮಾಡಿಕೊಳ್ಳಲು ಕಷ್ಟವಾಗುವದಿಲ್ಲ. ಬೋಧನೆಯು ತಾನೇ ಆ ಸ್ಥಾನವನ್ನು ಅವರಿಗೆ ವಹಿಸುತ್ತದೆ. ದೊಡ್ಡ ಸಂಗತಿಯು, ಅಂತಿಮಸ್ಥಿತಿಯು ಇನ್ನೂ ಮುಂದೆ ಇದೆ ಮತ್ತು ಅವರು ಸತತ ಅದರ ನಿರೀಕ್ಷೆಯಲ್ಲಿ ಜೀವಿಸುತ್ತಿರುವರು. ಆ ಅಂತಿಮ ಸ್ಥಿತಿಯು ಏನನ್ನು ಒಳಗೊಂಡಿದೆ? ಯೆಹೂದೀ ಧರ್ಮದ ಆಚರಣೆ ಮತ್ತು ರೂಪಗಳ ಪುನರುಜ್ಜೀವನದೊಂದಿಗೆ ಭೂಲೋಕದ ರಾಜ್ಯ! ಈ ಬೋಧನೆಯ ಕ್ರೈಸ್ತತ್ವದ ನಿಜವಾದ ಭಾವನೆಗೆ ತದ್ವಿರುದ್ಧವಾದದ್ದಾಗಿದೆಯಲ್ಲವೇ! ಅದು ನೆರಳುಗಳಿಗೆ ಹಿಂದಿರುಗಿ ಹೋಗುವುದಾಗಿದೆ! ಅದು ಗಂಡಾಂತರ ಕಾರಿಯಾದದ್ದು.

## ಮುಕ್ತಾಯ

ಸಭೆಯು ಭೂಲೋಕದಲ್ಲಿ ಇಂದು ಮತ್ತು ಎಂದೆಂದಿಗೂ ದೇವರಿಗೆ ಇರುವ ಒಂದೇ ರಾಜ್ಯವಾಗಿದೆ. ಅದು ಆತನ ನಿತ್ಯ ಉದ್ದೇಶದ ಭಾಗವಾಗಿದೆ. ಹೊಸ ಒಡಂಬಡಿಕೆಯು ಅದಕ್ಕೆ ಶ್ರೇಷ್ಠವಾದ ಮಹತ್ವದ ಸ್ಥಾನವನ್ನು ಕೊಡುತ್ತದೆ. ಅದು ದೊಡ್ಡದು. ಅದರ ಪಕ್ಕದಲ್ಲಿ ಇತರ ಎಲ್ಲಾ ಸಂಘಟನೆಗಳು ಅತೀ ಚಿಕ್ಕದಾದವುಗಳಾಗುತ್ತದೆ. ಯೇಸು ಅದರ ಮೇಲೆ ಆಳಿಕೆ ಮಾಡುತ್ತಾನೆ. ಮೇಲಿನ ಪರಲೋಕದಲ್ಲಿ ದಾವೀದನ ಸಿಂಹಾಸನದಿಂದ ಆತನು ಅರಸನಂತೆ ಆಳುತ್ತಾನೆ. ಎಲ್ಲಾ ವೈರಿಗಳು ಆತನ ಪಾದಗಳ ಕೆಳಗೆ ಹಾಕಲ್ಪಡುವವರೆಗೆ ಆತನು ಆಳತಕ್ಕದ್ದು. ನಾಶಪಡಿಸಲ್ಪಡುವ "ಕೊನೆಯ ವೈರಿಯು" "ಮರಣ" (1 ಕೊರಿಂಥ 15:25, 26). ಕೊನೆಯ ದಿನದಂದು ದುಷ್ಟರ ಮತ್ತು ನೀತಿವಂತರ ಪುನರುತ್ಥಾನದಿಂದ ಅದು ನಾಶಗೊಳಿಸಲ್ಪಡುತ್ತದೆ (ಯೋಹಾನ 5:28, 29; 6:44; 12:48).

ಅಪೊಸ್ತಲರ ಕೃತ್ಯ 24:15ರಲ್ಲಿ ಹೇಳಿದಂತೆ "ಪುನರುತ್ಥಾನ" ಬಿರುವುದು. ಅಕ್ಷರಶಃ ಸಾವಿರ ವರುಷಗಳ ಅವಧಿಯಿಂದ ಬೇರ್ಪಡಸಲ್ಪಟ್ಟ ನೀತಿವಂತರ ಪುನರುತ್ಥಾನ ಒಂದು ಹಾಗೂ ದುಷ್ಟರ ಪುನರುತ್ಥಾನ ಒಂದು ಎಂದು ಎರಡು ಪುನರುತ್ಥಾನಗಳು ಇರುವುದಿಲ್ಲ. ಕೊನೆಯ ದಿನದಂದು ಸತ್ತವರು ಎಬ್ಬಿಸಲ್ಪಟ್ಟಾಗ ಮತ್ತು ಕೊನೆಯ ವೈರಿಯು ನಾಶಪಡಿಸಲ್ಪಟ್ಟಾಗ, ಕ್ರಿಸ್ತನು ರಾಜ್ಯವನ್ನು ತಂದೆ ದೇವರಿಗೆ ಒಪ್ಪಿಸುವನು. ಈ ರಾಜ್ಯದ ವಿರೋಧವಾಗಿ ಪಾತಾಳದ ದ್ವಾರಗಳು ಉಳಿದುಕೊಳ್ಳಲಾರವು. ಇದು ಚಲಿಸಲಾಗದ ರಾಜ್ಯ, ಸದಾಕಾಲವೂ ಇದ್ದುಳಿಯುವ ರಾಜ್ಯವಾಗಿರುವುದು.

ಆತ್ಮಗಳ ಮನೆಯಿರುವುದೆಂದು ಕ್ರೈಸ್ತರು ನಂಬುವುದು, ಮತ್ತು ಅವರು ಆ ಮನೆಗಾಗಿ ಮುನ್ನೋಡುತ್ತಿರುವರು. ಭೂಲೋಕದ ನಿವಾಸಸ್ಥಾನಕ್ಕಾಗಿ ಇರುವ ನಿರೀಕ್ಷೆ ಅದಲ್ಲ. ಆದರೆ ಅವರಿಗಾಗಿ, "ಅದು ಲಯ, ಕಳಂಕ ಕ್ಷಯಗಳಿಲ್ಲದ ಬಾಧ್ಯತೆಯಾಗಿರವುದು, ಪರಲೋಕದಲ್ಲಿ ಅವರಿಗಾಗಿ ಕಾದಿರಿಸಲ್ಪಟ್ಟಿರುವುದು" (1 ಪೇತ್ರ 1:4).

© 2009 Truth for Today